# ಕೋಟೆ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯಲ್ಲಿ ಸಂವಿಧಾನ ಅಂಗೀಕಾರ ದಿನಾಚರಣೆ



ಎಚ್.ಡಿ.ಕೋಟೆಯ ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಂವಿಧಾನ ಅಂಗೀಕಾರ ದಿನಾಚರಣೆ ಕಾರ್ಯಕ್ರಮವನ್ನು ಪ್ರಾಧ್ಯಾಪಕ ಡಾ. ಮಹಾಲಿಂಗ ಉದ್ಘಾಟಿಸಿದರು.

■ **ವಿಕ ಸುದ್ದಿಲೋಕ** ಎಚ್.ಡಿ.ಕೋಟೆ

ರಾಷ್ಟ್ರವನ್ನು ವ್ಯವಸ್ಥಿತವಾಗಿ ನಡೆಸಲು ಆಯಾ ದೇಶಗಳು ಅಳವಡಿಸಿಕೊಂಡಿರುವ ಸಂವಿಧಾನದಿಂದ ಪ್ರೇರಣೆಗೊಂಡು, ನಮ್ಮ ದೇಶದ ಸಂವಿಧಾನ ರಚನೆಗೊಂಡಿದೆ ಎಂದು ಪ್ರಾಧ್ಯಾಪಕ ಡಾ. ಮಹಾಲಿಂಗ ತಿಳಿಸಿದರು.

ಪಟ್ಟಣದ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಸಂವಿಧಾನ ಅಂಗೀಕರಿಸಿದ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

''ಅಮೆರಿಕ, ರಷ್ಯಾ, ಕೆನಡ, ಫ್ರಾನ್ಸ್, ಇಸ್ರೇಲ್ ಸೇರಿದಂತೆ ಇನ್ನೂ ಅನೇಕ ದೇಶಗಳ ಸಂವಿಧಾನದ ಅಂಶಗಳನ್ನು ನಮ್ಮ ದೇಶದ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲಾಗಿದೆ'' ಎಂದರು.

ಸಂವಿಧಾನದ ಮಹತ್ವ ಅರಿತಿದ್ದ ದೇಶದ ಮೊದಲ ಪ್ರಧಾನಿ ನೆಹರು ಅವರು 1920 ಮತ್ತು 1933 ರಲ್ಲಿ ಸಂವಿಧಾನದ ರಚನೆಗೆ ಸರಕಾರಕ್ಕೆ ಮನವಿ ಮಾಡಿದ್ದರು. 1939 ರಲ್ಲಿ ಎರಡನೇ ಮಹಾಯುದ್ಧ ನಡೆದ ಸಂದರ್ಭದಲ್ಲೂ ಆಂಗ್ಲ ಸರಕಾರಕ್ಕೆ ಮನವಿ ಕೊಟ್ಟಿದ್ದರು,'' ಎಂದರು.

ಸಂವಿಧಾನದ ರಚನೆಗೆ ಮುನ್ನ 7675 ಮಸೂದೆಗಳನ್ನು ಚರ್ಚೆಗೆ ಇಡಲಾಗಿತ್ತು. ಕೊನೆಗೆ ನಮ್ಮ ಸಂವಿಧಾನದಲ್ಲಿ 2475 ಮಸೂದೆಗಳನ್ನು ಇಡಲಾಯಿತು. ಸಂವಿಧಾನ ರಚನೆ ಆಗಲಿಕ್ಕೆ ಸಂವಿಧಾನ ಕರಡು ಸಮಿತಿ, 2 ವರ್ಷ, 11 ತಿಂಗಳು, 18 ದಿನ ತೆಗೆದುಕೊಂಡಿತ್ತು. ಸಂವಿಧಾನದ ಅನುಸಾರ ದೇಶದ ಪ್ರತಿಯೊಬ್ಬರಿಗೂ ಅವರ ಹಕ್ಕುಗಳು ಸಿಗಬೇಕು. ಸಮಾನತೆ ಮತ್ತು ಸ್ವಾತಂತ್ರ್ಯ ಸಿಗಬೇಕು. ಅಂದರೆ ನಮ್ಮನ್ನು ಆಳುವ ಸರಕಾರಗಳು, ದೇಶದ ಅಭಿವೃದ್ಧಿಯನ್ನು ಮುಂದಿಟ್ಟುಕೊಂಡು ಕೆಲಸ ಮಾಡಬೇಕು,'' ಎಂದರು.

ಪ್ರಾಂಶುಪಾಲ ಡಾ. ಜೆ.ಎನ್. ವೆಂಕಟೇಶ್, ಉಪನ್ಯಾಸಕರಾದ ಪ್ರಕಾಶ್ ನಾಯಕ್, ವೆಂಕಟೇಶ್ ರಾಜು, ಬಿ.ಸಿ. ಮಹೇಂದ್ರ, ಮಂಜು, ಮಹದೇವ, ಅವೀನಾ, ಕೆ.ಪಿ.ಪ್ರೀತಿ, ಚಂದನಾ, ರಮ್ಯ, ಚೈತ್ರಾ, ಅಮೂಲ್ಯ, ಚಿಕ್ಕದೇವಿ, ಸಿದ್ದರಾಜು, ರವಿ, ಕಾವ್ಯಬಾಯಿ, ಸಿಬ್ಬದಿ ರಾಜೇಶ್ ಹಾಜರಿದ್ದರು.



On Dated: 26-11-2024 Organized Constitution Day Programme All NSS Units College at College Premises. NSS Volunteers Participated In the Programme.

ತಮ್ಮ ನಂಬುಗೆಯ

ರಾ.ಸೇ.ಯೋ. ಕಾರ್ಯಕ್ರಮ ಸಂಯೋಜನಾಧಿಕಾರಿ
Programme Co-ordinator
National Service Scheme
NSS Bhavan
Sahukar Chennaiah Road
Opp. Saraswathipuram Police Station
Saraswathipuram, Mysuru-09